# ರೇಷ್ಮೆ ಕೃಷಿಕರಿಗೆ ಹಾಗೂ ನೂಲು ಬಿಚ್ಚಾಣಿಕೆದಾರರಿಗೆ ಲಭ್ಯವಿರುವ ಸಹಾಯ – ಸೌಲಭ್ಯಗಳು

ದೇಶದ ರೇಷ್ಮೆ ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿರುವ ಕರ್ನಾಟಕದಲ್ಲಿ ರೇಷ್ಮೆ ಉದ್ಯಮಶೀಲರನ್ನು ಸಾಲಸೌಲಭ್ಯ, ಸಹಾಯಧನ, ಪ್ರೋತ್ಸಾಹಧನ ಮತ್ತು ತರಬೇತಿ ಒದಗಿಸುವ ಮೂಲಕ ಉತ್ತೇಜಿಸಲಾಗುತ್ತಿದೆ. ರೇಷ್ಮೆ ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸಲು ಪ್ರಮುಖ ಚಟುವಟಿಕೆಗಳಾದ ಹಿಪ್ಪುನೇರಳೆ ಬೇಸಾಯ, ರೇಷ್ಮೆ ಹುಳು ಸಾಕಾಣಿಕೆ ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆ ಕೈಗೊಳ್ಳುವವರಿಗೆ ಕಲ್ಪಿಸಿರುವ ಸಹಾಯ ಸೌಲಭ್ಯಗಳ ವಿವರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

## ಹಿಪ್ಪುನೇರಳೆ ಬೇಸಾಯ

1. **ಮಣ್ಣು ಪರೀಕ್ಷೆ :** ಮಣ್ಣಿನಲ್ಲಿರುವ ಪೋಷಕಾಂಶಗಳ ಪ್ರಮಾಣವನ್ನು ತಿಳಿಯಲು ಹಾಗೂ ಹಿಪ್ಪುನೇರಳೆ ಬೆಳೆಯಲು ಕೊರತೆಯಿರುವ ಪೋಷಕಾಂಶಗಳ ಬಗ್ಗೆ ಸುಧಾರಣೆ ಕ್ರಮ ಕೈಗೊಳ್ಳಲು, ಹೊಸದಾಗಿ ಮತ್ತು ಈಗಾಗಲೇ ಹಿಪ್ಪುನೇರಳೆ ಕೃಷಿ ಕೈಕೊಂಡ ರೈತರ ತೋಟಗಳ ಮಣ್ಣಿನ ಪರೀಕ್ಷೆ ಅತ್ಯಗತ್ಯ. ರೇಷ್ಮೆ ಬೆಳೆಗಾರರ ಹಿಪ್ಪುನೇರಳೆ ತೋಟಗಳಿಂದ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆಗಾಗಿ ಕೆ.ಎಸ್.ಎಸ್.ಆರ್.ಡಿ.ಐ., ಸಿ.ಎಸ್.ಆರ್.ಟಿ.ಐ. ಮತ್ತು ಇಫ್ಕೋ ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ. ಪರೀಕ್ಷಾ ವರದಿಯ ಶಿಫಾರಸ್ಸನ್ನು ಆಧರಿಸಿ ಮಣ್ಣಿನ ಸುಧಾರಣೆ ಮತ್ತು ಗೊಬ್ಬರಗಳ ಬಳಕೆ ಬಗ್ಗೆ ಮಾರ್ಗದರ್ಶನ ನೀಡಲಾಗುವುದು.

2. **ಹಿಪ್ಪುನೇರಳೆ ವ್ಯವಸಾಯಕ್ಕೆ ಸಹಾಯಧನ :** ಹೊಸ ಹಿಪ್ಪುನೇರಳೆ ತಳಿಯನ್ನು ನಾಟಿ ಮಾಡಿದಲ್ಲಿ ಎಕರೆಗೆ ರೂ. 5,000/– ದಂತೆ ಸಹಾಯಧನವನ್ನು ರೇಷ್ಮೆ ವರದಾನ ಯೋಜನೆಯಡಿ ನೀಡಲಾಗುವುದು. ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಗಳಡಿ ಹೊಸದಾಗಿ ಹಿಪ್ಪುನೇರಳೆ ನಾಟಿ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರಿಗೆ ಒಂದು ಎಕರೆಗೆ ರೂ. 5,500/– ರ ಸಹಾಯಧನವನ್ನು ನೀಡಲಾಗುವುದು. ಅದೇ ರೀತಿ ಜಿಲ್ಲಾ ವಲಯ ಕಾರ್ಯಕ್ರಮದಡಿಯಲ್ಲಿಯೂ ರೂ. 5,000/– ಗಳ ಸಹಾಯಧನ ನೀಡುವ ಸೌಲಭ್ಯವಿದೆ.

3. **ಹನಿ ನೀರಾವರಿ ಅಳವಡಿಕೆಗೆ ಸಹಾಯಧನ :** ಹನಿ ನೀರಾತವರಿ ಘಟಕ ಅಳವಡಿಸಲು ಒಂದು ಹೆಕ್ಟೇರ್ ವಿಸ್ತೀರ್ಣಕ್ಕೆ ಘಟಕದರ ರೂ. 50,000/– ಗಳನ್ನು ನಿಗದಿಪಡಿಸಿದ್ದು ಶೇ. 75 ರಷ್ಟು ಅಂದರೆ ಗರಿಷ್ಠ ರೂ. 37,500/– ಸಹಾಯಧನವನ್ನಾಗಿ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತರಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳಡಿ ನೀಡಲಾಗುವುದು. 2ನೇ ಹೆಕ್ಟೇರು ಪ್ರದೇಶದಲ್ಲಿ ಹನಿ ನೀರಾವರಿ ಅಳವಡಿಸಿದ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ವರದಾನ ಯೋಜನೆಯಡಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಅನುಕ್ರಮವಾಗಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳಡಿ ರೂ. 37,500/– ಗಳ ಸಹಾಯಧನ ನೀಡಲಾಗುವುದು.

